**ಅ.ದಾವಾ ನಂ. 17/2016** ಪಿ.ಡಬ್ಲ್ಯೂ-2

**ದಿನಾಂಕ 12/06/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ** ಶ್ರೀ ಆರ್.ಡಿ.ಆರ್. ವಕೀಲರಿಂದ

ನನಗೆ ನಮ್ಮ ಊರಿನಲ್ಲಿ ಯಾವ ಸರ್ವೆ ನಂಬರಿನಲ್ಲಿ ಎಷ್ಟೆಷ್ಟು ವಿಸ್ತೀರ್ಣದಲ್ಲಿ ಜಮೀನಿದೆ ಎಂದು ಗೊತ್ತಿಲ್ಲ. ನನ್ನ ಜಮೀನುಗಳು ಪಿತ್ರಾರ್ಜಿತವಾಗಿ ನನಗೆ ಬಂದಿರುತ್ತವೆ. ನನಗೂ ನನ್ನ ಅಣ್ಣ ತಮ್ಮಂದಿರಿಗೂ ಯಾವುದೇ ವಿಭಾಗ ಪತ್ರ ಆಗಿಲ್ಲ. ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ಕೃಷ್ಣೇಗೌಡರು ನನ್ನನ್ನು ಕರೆದುಕೊಂಡು ಬಂದಿರುತ್ತಾರೆ. ಕೃಷ್ಣೇಗೌಡ ನನಗೆ ಅಣ್ಣನ ಮಗನಾಗುತ್ತಾನೆ. ಈ ದಾವೆ ಕೃಷ್ಣೇಗೌಡರು ಈರೇಗೌಡರ ವಿರುದ್ಧ ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ದಾವೆಯನ್ನು ಸರ್ವೆ ನಂ. 173/4 ಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಸದರಿ ಜಮೀನು 5 ಗುಂಟೆ ವಿಸ್ತೀರ್ಣ ಹೊಂದಿದೆ. ಸದರಿ ಜಮೀನಿನ ಪೂರ್ವಕ್ಕೆ ಕೆಂಗೇಗೌಡ, ಪಶ್ಚಿಮಕ್ಕೆ ನಂಜುಂಡೇಗೌಡ, ಉತ್ತರಕ್ಕೆ ರಾಮೇಗೌಡ ಹಾಗೂ ದಕ್ಷಿಣಕ್ಕೆ ರಸ್ತೆ. ನಾವು ಒಟ್ಟು 8 ಮಂದಿ ಅಣ್ಣತಮ್ಮಂದಿರಿರುತ್ತೇವೆ. ನನಗೆ 4 ಮಂದಿ ಅಕ್ಕತಂಗಿಯರು. ನಾವು ಅಣ್ಣತಮ್ಮಂದಿರು ಪಾಲು ಪಟ್ಟಿಯನ್ನು ಮಾಡಿಕೊಂಡಿದ್ದೇವೆ. ನಾವು ಪಾಲುಪಟ್ಟಿ ಮಾಡಿಕೊಂಡು ಈಗ್ಗೆ 40 ವರ್ಷಗಳಾಗಿವೆ. ಸದರಿ ಪಾಲುಪಟ್ಟಿ ಹಿರಿಯನಾದ ಚಿಕ್ಕೇಗೌಡನ ಬಳಿ ಇದೆ. ನನಗೆ ಸರ್ವೆ ನಂ. 53 ರಲ್ಲಿ 1 ಎಕರೆ, 54 ರಲ್ಲಿ $1\frac{1}{4}$ ಎಕರೆ, ಸರ್ವೆ 33 ರಲ್ಲಿ 30 ಗುಂಟೆ ಬರುತ್ತದೆ.

2. ವಾದಿಯ ತಂದೆ ನನಗೆ ಅಣ್ಣನಾಗಬೇಕು. ಆತನಿಗೆ ಯಾವ ಯಾವ ಸರ್ವೆ ನಂಬರಿನಲ್ಲಿ ಜಮೀನು ಬಂದಿತ್ತೋ ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ದೇವೇಗೌಡ. ನನ್ನ ತಂದೆಗೆ 3 ಮಂದಿ ಹೆಂಡತಿಯರು. ನನ್ನ ತಾಯಿಯ ಹೆಸರು ಜವರಮ್ಮ. ಮಿಕ್ಕಾ ಇಬ್ಬರ ಹೆಂಡತಿಯರ ಹೆಸರು

ನನಗೆ ಗೊತ್ತಿಲ್ಲ. ನನ್ನ ತಾಯಿ 3 ನೇ ಹೆಂಡತಿಯಾಗಿದ್ದರು. ನನ್ನ ತತಂದೆಯ ಹಿರಿಯ ಹೆಂಡತಿ ಹೊಂಬಾಳೆ ಎಂದರೆ ನನಗೆ ಗೊತ್ತಿಲ್ಲ. ಹಿರಿಯ ಹೆಂಡತಿಗೆ ಎಷ್ಟು ಮಂದಿ ಮಕ್ಕಳೋ ನನಗೆ ಗೊತ್ತಿಲ್ಲ. 2 ನೇ ಹೆಂಡತಿ ಹೆಸರು ಸಣ್ಣಮ್ಮ ಎಂದರೆ ಸರಿ. ಸಣ್ಣಮ್ಮನಿಗೆ 2 ಗಂಡು, 2 ಹೆಣ್ಣುಮಕ್ಕಳು. ಅಣ್ಣೇಗೌಡ, ನಂಜೇಗೌಡ ಗಂಡುಮಕ್ಕಳು, ನಿಂಗಮ್ಮ ಮತ್ತು ಪುಟ್ಟಮ್ಮ ಹೆಣ್ಣುಮಕ್ಕಳೆಂದರೆ ಸರಿ. ಸದರಿ ನಂಜೇಗೌಡನ ಮಗನೇ ಈ ಪ್ರಕರಣದ ವಾದಿ ಎಂದರೆ ಸರಿ. ಅಣ್ಣೇಗೌಡರ ಮಗ ರಾಮೇಗೌಡರೆಂದರೆ ಸರಿ.ರಾಮೇಗೌಡನು ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿದಿದ್ದರು ಎಂದರೆ ಸರಿ. ರಾಮೇಗೌಡರು ಕೃಷ್ಣೇಗೌಡರ ದೊಡ್ಡಪ್ಪನ ಮಗನಾಗಬೇಕೆಂದರೆ ಸರಿ. ಜವರಮ್ಮನಿಗೆ 6 ಮಂದಿಯೂ ಗಂಡುಮಕ್ಕಳು. ಸದರಿ 6 ಗಂಡುಮಕ್ಕಳೆಂದೆರೆ ಚಿಕ್ಕೇಗೌಡ, ಬಸವೇಗೌಡ, ಬೊಮ್ಮೇಗೌಡ, ಈರೇಗೌಡ, ಜವರಾಜೇಗೌಡ ಮತ್ತು ಅಣ್ಣೇಗೌಡ ಎಂದರೆ ಸರಿ. ನಾನು ಕೃಷ್ಣೇಗೌಡನಿಗೆ ಚಿಕ್ಕಪ್ಪನಾಗಬೇಕೆಂದರೆ ಸರಿ. ನನ್ನ ತಾಯಿ ಜವರಮ್ಮನಿಗೆ 3 ಮಂದಿ ಹೆಣ್ಣು ಮಕಳೆಂದರೆ ಸರಿ. ಅವರೆಂದೆರ ಕಾಳಮ್ಮ, ಸಣ್ಣಕ್ಕ ಮತ್ತು ಸುಶೀಲ.

3. ನಮ್ಮ ಗ್ರಾಮದ ಸರ್ವೆ ನಂ. 173 ರಲ್ಲಿ 5 ಎಕರೆ 35 ಗುಂಟೆ ಜಮೀನಿದೆ ಎಂದರೆ ಇರಬಹುದು. ಸರ್ವೆ ನಂ. 173 ದುರಸ್ತಾಗಿ 6 ಪೋಡುಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ. 173/1 ರಲ್ಲಿ 3 ಎಕರೆ 10 ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 173/2 ರಲ್ಲಿ 20 ಗುಂಟೆ ಜಮೀನಿದೆ ಎಂದರೆ ನನಗೆ ಗೊತ್ತಿಲ್ಲ. 173/3 ರಲ್ಲೂ 20 ಗುಂಟೆ ಜಮೀನಿದೆ ಎಂದರೆ ನನಗೆ ಗೊತ್ತಿಲ್ಲ. 173/4 ರಲ್ಲಿ 2 ಗುಂಟೆ ಜಮೀನಿದೆ ಎಂದರೆ ಸರಿ. 173/5 ರಲ್ಲಿ 1 ಗುಂಟೆ ಜಮೀದೆ. 173/5 ರಲ್ಲಿರುವ 1 ಗುಂಟೆ ಜಮೀನು ಅಣ್ಣೇಗೌಡರ ಮಗ ರಾಮೇಗೌಡರಿಗೆ (ಪ್ರಾ.ಸಾ 3) ಸೇರಿರುತ್ತದೆ. ಸರ್ವೆ ನಂ. 173/6 ರಲ್ಲಿ 1 ಎಕರೆ 22 ಗುಂಟೆ ಪೈಕಿ 5 ಗುಂಟೆ ಕರಾಬು ಹೋಗಿ 1

ಎಕರೆ 17 ಗುಂಟೆ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತ ಬಸವೇಗೌಡರೆಂದರೆ ಸರಿ. ಬಸವೇಗೌಡರಿಗೆ ಬಸವೇಗೌಡ ಮತ್ತು ಬೊಮ್ಮೇಗೌಡ ಎಂಬ ಇಬ್ಬರು ಮಕ್ಕಳೆಂದರೆ ಸರಿ. ಸದರಿ ಇಬ್ಬರೂ ಮಕ್ಕಳು ಒಂದೇ ತಾಯಿಯ ಮಕ್ಕಳಾಗಿರುತ್ತಾರೆ. ನನ್ನ ತಾತ ಬಸವೇಗೌಡರಿಗೆ ಎಷ್ಟು ಮಂದಿ ಮಕ್ಕಳೋ ನನಗೆ ಗೊತ್ತಿಲ್ಲ. ನನ್ನ ತಂದೆ ಜೊತೆ ಹುಟ್ಟಿದಂತಹವರು ದೇವೇಗೌಡ, ಈರೇಗೌಡ, ಕೆಂಗೇಗೌಡ ಹಾಗೂ ಬೊಮ್ಮೇಗೌಡ. ನನ್ನ ತಾತನ ತಮ್ಮ ಬೊಮ್ಮೇಗೌಡರಿಗೆ ಅಪ್ಪಾಜಿಗೌಡ, ಕೂಗೇಗೌಡ, ಈರೇಗೌಡ ಎಂಬ ಮೂರು ಮಕ್ಕಳಿದ್ದರು. ಈರೇಗೌಡರು ಎಂದರೆ ಈ ಪ್ರಕರಣದ ಮೊದಲನೇ ಪ್ರತಿವಾದಿಯಾಗಿರುತ್ತಾರೆ. ಬಸವೇಗೌಡ ಮತ್ತು ಬೊಮ್ಮೇಗೌಡರ ನಡುವೆ ವಿಭಾಗ ಆಗಿತ್ತು ಎಂದರೆ ಸರಿ. ಅವರಿಬ್ಬರಿಗೆ ಯಾವ ಯಾವ ಸರ್ವೆ ನಂಬರಿನಲ್ಲಿ ಭಾಗ ಬಂದಿತ್ತೋ ನನಗೆ ಗೊತ್ತಿಲ್ಲ. 173/5 ರಲ್ಲಿರುವ ಜಮೀನು ಬಸವ ಬಿನ್ ಈರೇಗೌಡರಿಗೆ ಸೇರಿದ ಜಮೀನು ಎಂದರೆ ಸರಿಯಲ್ಲ. 173/6 ಪುಟ್ಟೇಗೌಡರ ಮಗ ಅಪ್ಪಣ್ಣೇಗೌಡರವರಿಗೆ ಸೇರಿದ ಜಮೀನು ಎಂದರೆ ನನಗೆ ಗೊತ್ತಿಲ್ಲ.

4. ಅಪ್ಪಾಜಿಗೌಡ, ಕೂಗೇಗೌಡ ಹಾಗೂ ಈರೇಗೌಡರು ಜಮೀನಿನ ಹಿಸ್ಸೆ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿರುತ್ತದೆ. ಎಲ್ಲಾ ಜಮೀನು ಸಹ ಪೌತಿ ಪ್ರಕಾರ ಹಿಸ್ಸೆ ಖಾತೆಯಾಗಿರುತ್ತದೆ. ಅಪ್ಪಾಜಿಗೌಡರು ಈಗ ಜೀವಂತ ಇರುವುದಿಲ್ಲ. ಅಪ್ಪಾಜೀಗೌಡರ ಮರಣಾನಂತರ ಆತನ ಮಕ್ಕಳೆಲ್ಲರೂ ಪ್ರತ್ಯೇಕ ಹಿಸ್ಸೆ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ಹಿಸ್ಸೆಯಲ್ಲಿ 173/4 ರಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ವಿಸ್ತೀರ್ಣ ಹೋಯಿತೆಂದು ನನಗೆ ಗೊತ್ತಿಲ್ಲ. ಸದರಿ ಹಿಸ್ಸೆಯಲ್ಲಿ ದೇವರಾಜೇಗೌಡರು ಮತ್ತು ಬಸವೇಗೌಡರಿಗೆ ಒಟ್ಟಿಗೆ ಮುಕ್ಕಾಲು ಗುಂಟೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅರ್ಧ ಗುಂಟೆ ಜಮೀನು ಈರೇಗೌಡರಿಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಅವರವರಿಗೆ ಹಿಸ್ಸೆಗೆ ಬಂದಂತಹ

ಜಮೀನಿನಲ್ಲಿ ಅವರೇ ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ 173/4 ರ 2 ಗುಂಟೆಯಲ್ಲಿ ಇಲ್ಲ ಎಂದು.

5. ಕೃಷ್ಣೇಗೌಡನಿಗೆ 173/4 ರಲ್ಲಿ ಜಮೀನು ಬಂದಿರುವ ಬಗ್ಗೆ ಖಾತೆ ದಾಖಲೆಯನ್ನು ನೋಡಿದ್ದೇನೆ. ಅದು ಬೊಮ್ಮೇಗೌಡರಿಂದ 1 ಗುಂಟೆ ಮತ್ತು ಇನ್ನೊಂದು ಗುಂಟೆ ನಂಜೇಗೌಡರಿಂದ ಬಂದಿರುವುದು ನೋಡಿರುತ್ತೇನೆ. ಅವರಿಬ್ಬರು ಸೇರಿ ಪತ್ರ ಮಾಡಿಕೊಟ್ಟಿದ್ದಾರೆ. ಬೊಮ್ಮೇಗೌಡರು ಬರೆದುಕೊಟ್ಟಿರುವ ಪತ್ರಕ್ಕೆ ಚೆಕ್ಕುಬಂದಿ ಹಾಕಿ ಕೊಟ್ಟಿರುತ್ತಾರೆ ಬೊಮ್ಮೇಗೌಡರ ಬರೆದುಕೊಟ್ಟಿರುವ 1 ಗುಂಟೆಯ ಪೂರ್ವಕ್ಕೆ ಕೆಂಗೇಗೌಡ, ಪಶ್ಚಿಮಕ್ಕೆ ನಂಜುಂಡೇಗೌಡ, ಉತ್ತರಕ್ಕೆ ರಾಮೇಗೌಡ ಹಾಗೂ ದಕ್ಷಿಣಕ್ಕೆ ಸರ್ಕಾರಿ ರಸ್ತೆ. ನಂಜೇಗೌಡರೂ ಸಹ ಚೆಕ್ಕುಬಂದಿಯನ್ನು ಹಾಕಿಯೇ ಕೊಟ್ಟಿದ್ದಾರೆ. ನಂಜೇಗೌಡ ಬರೆದುಕೊಟ್ಟಿರುವ ಪತ್ರದಲ್ಲೂ ಬೊಮ್ಮೇಗೌಡರ ಚೆಕ್ಕುಬಂದಿಯೇ ಇರುತ್ತದೆ. ವಾದಿ ಈ ದಾವೆಯಲ್ಲಿ ಏನು ಚೆಕ್ಕುಬಂದಿ ನಮೂದು ಮಾಡಿಕೊಂಡಿದ್ದಾರೋ ನಾನು ನೋಡಿಲ್ಲ.173/4 ರಲ್ಲಿ ಕೃಷ್ಣೇಗೌಡನಿಗೆ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಮುತ್ತಜ್ಜನ ಕಾಲಕ್ಕೆ 173/1 ಮತ್ತು 173/3 ಮಾತ್ರ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಈರೇಗೌಡರ ಕುಟುಂಬಕ್ಕೆ 173/2 ಮತು 173/4 ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಹೆಸರುಗಳೆಲ್ಲಾ ಒಂದೇ ರೀತಿಯಲ್ಲಿರುವುದನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಮಾಹಿತಿ ನೀಡಿ ಕೃಷ್ಣೇಗೌಡರ ಕುಟುಂಬದವರು ಅಕ್ರಮವಾಗಿ ಪೌತಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ನನ್ನ ಚಿಕ್ಕಪ್ಪನ ಹೆಸರು ಬೊಮ್ಮೇಗೌಡ ಆತನ ತಂದೆಯ ಹೆಸರು ಬೊಮ್ಮೇಗೌಡ. ಈರೇಗೌಡ, ಬಸವೇಗೌಡ ಮತ್ತು ದೇವರಾಜೇಗೌಡರವರ ಆಸ್ತಿ ಕಬಳಿಸುವ ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ತಿಳಿದಿದ್ದರು ವಾದಿ

ನನ್ನ ಚಿಕ್ಕಪ್ಪನ ಮಗನಾಗಿರುವ ಕಾರಣ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣನ ಮಗನಾದ ರಾಮೇಗೌಡ ಊರಿನಲ್ಲೇ ಇದ್ದಾನೆ. ಆತ ಆರೋಗ್ಯವಾಗಿಯೇ ಇದ್ದಾರೆ.

**ಮರು ವಿಚಾರಣೆಃ ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**